ಗೋಕಾಕ್ ತಾಲ್ಲೂಕಿನ ಬರಗಾಲ ಪ್ರದೇಶದಲ್ಲಿ ಜಲಾನಯನ ಯೋಜನೆ ಕೈಗೆತ್ತಿಕೊಂಡಿರುವ ಬಗ್ಗೆ

೪೧೮ (೨೮೯) ಶ್ರೀ ಆರ್. ಎಂ. ಪಾಟೀಲ್, (ಅರಭಾವಿ). ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ. –

ಅ) ಗೋಕಾಕ್ ತಾಲ್ಲೂಕಿನಲ್ಲಿ ಬರಗಾಲಕ್ಕೆ ತುತ್ತಾಗಿರುವ ಹಳ್ಳಿಗಳೆಷ್ಟು ?

ಆ) ಈ ಕ್ಷೇತ್ರದಲ್ಲಿ ಜಲಾನಯನ ಪ್ರದೇಶವನ್ನಾಗಿ ಮಾಡಲು ಯಾವಾಗ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು). –

ಅ) ಗುರುತಿಸಿರುವುದಿಲ್ಲ.

ಆ) ಗೋಕಾಕ್ ತಾಲ್ಲೂಕಿನಲ್ಲಿ ಈಗಾಗಲೇ ಜಲಾನಯನ ಅಭಿವೃದ್ಧಿ ಕಾರ್ಯಕ್ರಮವನ್ನು ಬರಪೀಡಿತ ಪ್ರದೇಶಾಭಿವೃದ್ಧಿ ಯೋಜನೆ (ಡಿಪಿ ಎಪಿ) ಹಾಗೂ ಕೇಂದ್ರ ಪುರಸ್ಕೃತ ಸಣ್ಣ ಮತ್ತು ಅತಿ ಸಣ್ಣ ರೈತರ ಕೃಷಿ ಉತ್ಪಾದನೆ ಹೆಚ್ಚಿಸುವ ಯೋಜನೆಯಲ್ಲಿ ಕೈಗೊಳ್ಳಲಾಗಿದೆ.

ಘಟಪ್ರಭಾ ನದಿಯ ದಂಡೆಯಲ್ಲಿ ಬರುವ ಯಾತ ನೀರಾವರಿ ಯೋಜನೆಗಳು

೪೨೦ (೫೪೭) ಶ್ರೀ ಆರ್. ಎಂ. ಪಾಟೀಲ್(ಅರಭಾವಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ .—

ಅ) ಘಟಪ್ರಭಾ ನದಿಯ ದಂಡೆಯಲ್ಲಿರುವ ಯಾತ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು ?

ಆ) ಸದರಿ ಯೋಜನೆಗಳ ಹೆಸರು ಮತ್ತು ನೀರಾವರಿಯಾಗುವ ಕ್ಷೇತ್ರದ ವಿಸ್ತೀರ್ಣವೆಷ್ಟು ?

ಇ) ಪ್ರತಿ ಯಾತ ನೀರಾವರಿ ಯೋಜನೆಯ ಅಂದಾಜು ವೆಚ್ಚ ಎಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು). —

ಅ) ೧೫

ಆ) ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) — ,, —

ಅನುಬಂಧ

ಕ್ರಮ ಸಂಖ್ಯೆ	ಎತ ನೀರಾವರಿ ಯೋಜನೆಯ ಹೆಸರು	ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ)	ನೀರಾವರಿಯಾಗುವ ಕ್ಷೇತ್ರ (ಹೆಕ್ಟೇರು ಗಳಲ್ಲಿ)
೧)	ಹುಣಶ್ಯಾಳ	೫.೨೮	೨೦೦
೨)	ಅಡಿಬಟ್ಟಿ	೫.೭೦	೨೦೮
೩)	ಸುಣಧೋಳ	೧೧.೦೦	೮೨೯
೪)	ತಳಕಟನಾಳ	೫.೯೨	೨೭೧
೫)	ತಿಗಡಿ	೨೦.೬೦	೧೨೧೦
೬)	ಅವರ್ದಿ	೩೦.೦೦	೪೮೦
೭)	ಬೆನ್ನೂರು	೪.೬೭	೨೪೩
೮)	ಅನದಿನ್ನಿ	೧೦.೯೦	೩೭೪
೯)	ಮುರನಾಳ	೩.೨೭	೨೫೨
೧೦)	ಕಲಾದಗಿ	೬.೪೦	೨೪೩
೧೧)	ಉತ್ತೂರು ಜಾಲಿಬೇರ್	೫.೫೯	೫೫೩
೧೨)	ಕೊಣ್ಣೂರು	೧೫.೫೬	೪೬೦
೧೩)	ಬಾದರದಿನ್ನಿ	೩.೭೫	೪೧೬.೯೬
೧೪)	ಅನಗವಾಡಿ	೧.೭೫	೨೪೩.೫೯
೧೫)	ಬಾವಲತ್ತಿ	೩.೦೦	೪೭೩.೭೦